# ದಿನಾಂಕ: 08.12.2022 ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

**ಹಾಜರಿದ್ದ ಅಧಿಕಾರಿ/ನೌಕರರು:**

1) ಶ್ರೀ ಬಿ.ಕೃಷ್ಣಮೂರ್ತಿ : ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ
2) ಶ್ರೀ ಮಂಜುನಾಥ್ ಪ್ರಸಾದ್ ಎಂ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
3) ಶ್ರೀ ಪ್ರದೀಪ್ ಕುಮಾರ ಇ : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
4) ಶ್ರೀ ಸಂಪತ್ ಕುಮಾರ್ : ಸಹಾಯಕ ಇಂಜಿನಿಯರ್(ವಿ), ಬೆಳಗೊಳ ಶಾಖೆ
5) ಶ್ರೀ ಮಂಜುನಾಥ : ಸಹಾಯಕ ಇಂಜಿನಿಯರ್(ವಿ), ಅರಕೆರೆ ಶಾಖೆ
6) ಶ್ರೀ ನವೀನ್‌ಕುಮಾರ್ : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ
7) ಶ್ರೀ ಸಂತೋಷ್ : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ
8) ಶ್ರೀ ಅಭಿಷೇಕ್‌ಗೌಡ : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ
9) ಶ್ರೀ ದೇವರಾಜು : ಕಿರಿಯ ಇಂಜಿನಿಯರ್(ವಿ), 24*7 ಶ್ರೀರಂಗಪಟ್ಟಣ ಶಾಖೆ

ಜನಸಂಪರ್ಕ ಸಭೆಯ ಅಧ್ಯಕ್ಷರು ಬೆಳಗ್ಗೆ 03.00 ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಹಾಗೂ ಗ್ರಾಹಕರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | ಶ್ರೀ ಜವನೇಗೌಡ ಬಿನ್ ಹಾಳೇಗೌಡ, ಮಹದೇವಪುರ | |
| | ನನ್ನ ಕಬ್ಬಿನ ಫಸಲಿಗೆ ವಿದ್ಯುತ್ ಸಾರ್ಟ್ ಸರಕ್ಯೂಟ್‌ನಿಂದಾಗಿ ಬೆಂಕಿ ಅವಘಡ ಸಂಭವಿಸಿದ್ದು ಚಾವಿಸನಿನಿ ಇಲಾಖೆಯಿಂದ ಯಾವುದೇ ಪರಿಹಾರ ನೀಡಿರುವುದಿಲ್ಲ ಆದುದರಿಂದ ಸೂಕ್ತ ಪರಿಹಾರ ನೀಡಬೇಕೆಂದು ಕೋರಿರುತ್ತಾರೆ. | ಈಗಾಗಲೇ ದಿನಾಂಕ:28.08.2021ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಈ ದೂರನ್ನು ನೀಡಿದ್ದು, ಅಗತ್ಯ ದಾಖಲಾತಿಗಳನ್ನು ಈಗಾಗಲೇ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿರುತ್ತದೆ ಎಂದು ಸಕಾಇಂ(ವಿ), ರವರು ಅಧೀಕ್ಷಕ ಇಚಿಜಿನಿಯರ್(ವಿ), ರವರಿಗೆ ತಿಳಿಸಿದರು. |
| 2) | ಶ್ರೀ ಜಗದೀಶ್, ದೊಡ್ಡಪಾಳ್ಯ | |
| | ಐಗಖಕ ಯೋಜನೆಯಡಿಯಲ್ಲಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಲು ಕಾರ್ಯಾದೇಶ ನೀಡಿದ್ದು ಇದುವರೆಗು ಕಾಮಗಾರಿಯು ನಡೆದಿರುವುದಿಲ್ಲ ಆದುದರಿಂದ ಶೀಘ್ರವಾಗಿ ಕಾರ್ಯವನ್ನು ಪೂರ್ಣಗೊಳಿಸಕೊಡಬೇಕೆಂದು ಕೋರಿರುತ್ತಾರೆ. | ಸದರಿ ಕಾಮಗಾರಿಗೆ ಕಾರ್ಯಾಪ್ರೇಕ್ಷಣೆ ಸಂಖ್ಯೆ:1227 ದಿನಾಂಕ:26.08.2022ರಂದು ನೀಡಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |

ಸಭೆಯನ್ನು 4:00ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ದಿನಾಂಕ: 03-01-2022

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2022-23/3616

**ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1) ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2) ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
4) ಕಛೇರಿ ಪ್ರತಿ.

(ಮಂಜುನಾಥ್ ಪ್ರಸಾದ್.ಎಂ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.